## ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

ಸಿ.ಸಿ.467/2016

ಸಾಕ್ಷಿದಾರರ ಹೇಳಿಕೆಃ

| | | | | |
|---|---|---|---|---|
| ಹೆಸರು | : | ಸಣ್ಣತಿಮ್ಮಪ್ಪ | CW: 11 | PW: 10 |
| ತಂದೆಯ ಹೆಸರು | : | ತಿಮ್ಮಪ್ಪ | | |
| ವಯಸ್ಸು | : | 70 | | |
| ವೃತ್ತಿ | : | ವ್ಯವಸಾಯ | | |
| ವಾಸಸ್ಥಳ | : | ಫಲವನಹಳ್ಳಿ | | |

ದಿನಾಂಕಃ 23.08.2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯವಿಚಾರಣೆಃ – ಮಾನ್ಯ ಸ.ಸ.ಅ.ರವರಿಂದಃ–

ಆರೋಪಿಗಳು ಗೊತ್ತು ನನ್ನ ಸಂಬಂಧಿಕರು. ಚಾಸಾ 1 ನನ್ನ ಅಣ್ಣನ ಮಗ. ಚಾಸಾ 4 ನನ್ನ ಅತ್ತಿಗೆ. ಚಾಸಾ 5 ನನ್ನ ಅಣ್ಣನ ಮಗ. ಚಾಸಾ 6 ರಿಂದ 9 ರವರು ಗೊತ್ತು ನಮ್ಮ ಗ್ರಾಮಸ್ಥರು. ಚಾಸಾ 10 ನನ್ನ ಅಳಿಯ.

ಈಗ್ಗೆ 10 ವರ್ಷಗಳ ಹಿಂದೆ ಆರೋಪಿಗಳು ಚಾಸಾ 1 ಮತ್ತು ನನ್ನ ಮೇಲೆ ಗಲಾಟೆ ಮಾಡಿ, ಅವಾಚ್ಯ ಶಬ್ದಗಳಿಂದ ಬೈದು, ಚಾಸಾ 1, 4 ಮತ್ತು 5 ರವರಿಗೆ ಹೊಡೆದು, ಪ್ರಾಣ ಬೆದರಿಕೆ ಹಾಕಿ, ಜಗಳ ಬಿಡಿಸಲು ಹೋದ ಇತರೆ ಜನರಿಗೂ ಬೈದಿರುತ್ತಾರೆ. ಈ ಸಂಬಂಧ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ.

(ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.)

ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ–

ದಿಃ 27.01.2016 ರಂದು ಸಂಜೆ 6 ಗಂಟೆ ಸಮಯದಲ್ಲಿ ಮನೆಯಲ್ಲಿದ್ದಾಗ ಆರೋಪಿಗಳು ನಮ್ಮ ಮನೆಯ ಹತ್ತಿರ ಬಂದು ಅವಾಚ್ಯ ಶಬ್ದಗಳಿಂದ ಬೈಯ್ಯುತ್ತಿದ್ದರು ಎಂದರೆ ಸರಿ. ನಾನು, ಚಾಸಾ 1 ಮತ್ತು 10 ರವರು ಮನೆಯಿಂದ ಆಚೆ ಬಂದು ಯಾಕೆ ಅವಾಚ್ಯ ಶಬ್ದಗಳಿಂದ ಬೈಯ್ಯುತ್ತಿದ್ದೀರಾ ಎಂದು ಕೇಳಿದ್ದಕ್ಕೆ 1 ನೇ ಆರೋಪಿಯು ಕೈಗಳಿಂದ 1 ನೇ ಆರೋಪಿಗೆ ಬಲವಾಗಿ ಹೊಡೆದಿರುತ್ತಾರೆ ಎಂದರೆ ಸರಿ. 2 ನೇ ಆರೋಪಿ ಯು ಆಂಧ್ರಾ ಕುಡುಗೋಲಿನ ತುಂಡಿನಿಂದ ಚಾಸಾ 1 ರವರ ಮರ್ಮಾಂಗಕ್ಕೆ ಕೋಯ್ದು ರಕ್ತಗಾಯ ಮಾಡಿರುತ್ತಾರೆ ಎಂದರೆ ಸರಿ. ಆಗ ಚಾಸಾ 1 ರವರು ನೋವಿನಿಂದ ಚೀರಿಕೊಂಡಾಗ ಚಾಸಾ 4 ಮತ್ತು 5 ರವರು ಜಗಳ ಬಿಡಿಸಲು ಹೋದಾಗ ಆರೋಪಿಗಳು ಅವಾಚ್ಯ ಶಬ್ದಗಳಿಂದ ಅವರಿಗೆ ಬೈದಿರುತ್ತಾರೆ ಎಂದರೆ ಸರಿ. 3 ನೇ ಆರೋಪಿಯು ಉಗುರುಗಳಿಂದ ಚಾಸಾ 5 ರವರ ಎಡಗೈ ರಟ್ಟೆಯ ಮೇಲೆ ಗೀರಿ, ಕೈಕಾಲುಗಳಿಂದ ಹೊಡೆದು ಗಾಯಗೊಳಿಸಿರುತ್ತಾರೆ ಎಂದರೆ ಸರಿ. 4 ನೇ ಆರೋಪಿಯು ಚಾಸಾ 4 ರವರ ಮೇಲೆ ಕೈಕಾಲುಗಳಿಂದ ಹಲ್ಲೆ ಮಾಡಿ ಹೊಡೆದಿರುತ್ತಾರೆ ಎಂದರೆ ಸರಿ. 2 ನೇ ಆರೋಪಿಯು ದೊಣ್ಣೆಯಿಂದ ಚಾಸಾ 1 ರವರ ಬಲಗಾಲಿಗೆ ಹೊಡೆದು ಗಾಯಗೊಳಿಸಿದ್ದಾರೆ ಎಂದರೆ ಸರಿ. ನಾನು, ಚಾಸಾ 6 ರಿಂದ 9 ರವರು ಜಗಳ ಬಿಡಿಸಿರುತ್ತೇವೆ ಎಂದರೆ ಸರಿ. ನಾನು ಮತ್ತು ಚಾಸಾ 10 ರವರು ಚಾಸಾ 1, 4 ಮತ್ತು 5 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಲು ಸಿದ್ದತೆ ಮಾಡಿಕೊಳ್ಳುತ್ತಿದ್ದಾಗ ಆರೋಪಿಗಳು ಚಾಸಾ 1, 4 ಮತ್ತು 5 ರವರಿಗೆ ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು.ಮಾ 1 ಮತ್ತು 2 ನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ– ಆರೋಪಿಗಳ ಪರ ಸಿಆರ್ ವಕೀಲರಿಂದಃ–

ನನ್ನ ತಂದೆಗೆ ಇಬ್ಬರು ಹೆಂಡತಿಯರು ಎಂದರೆ ಸರಿ. ಮೊದಲ ಹೆಂಡತಿಗೆ ಎಷ್ಟು ಜನ ಮಕ್ಕಳು ಎಂದರೆ ಒಬ್ಬನೇ ಮಗ ಅವರ ಹೆಸರು ಎಂದರೆ ರಂಗಪ್ಪ. ನನ್ನ ತಾಯಿಯ ಹೆಸರು ರಂಗಮ್ಮ. ನಮ್ಮ ತಾಯಿಗೆ ನಾವು ಎಷ್ಟು ಜನ ಮಕ್ಕಳು ಎಂದರೆ ಸಾಕ್ಷಿಯು 4 ಜನ ಗಂಡು ಮಕ್ಕಳು , 4 ಜನ ಹೆಣ್ಣು ಮಕ್ಕಳು ಎಂದು ನುಡಿಯುತ್ತಾರೆ. ಮದುವೆಯಾದ ನಂತರ ಆರೋಪಿಗಳು ಮತ್ತು ನಾವು ಒಟ್ಟು ಕುಟುಂಬದಲ್ಲಿ ಇದ್ದೆವಾ ಎಂದರೆ ಇಲ್ಲ. ನಡೆದಿದೆ ಎನ್ನಲಾದ ಘಟನಾ ಸಮಯದಲ್ಲಿ ನಾನು ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ಮತ್ತು ಚಾಸಾ 1, 4 ಮತ್ತು 5 ರ ಮಧ್ಯೆ ಯಾವುದೇ ಗಲಾಟೆ ಆಗಿಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.